ಕರ್ನಾಟಕ ವಿಧಾನಮಂಡಲದ ನೌಕರರ ಗೃಹ ನಿರ್ಮಾಣ ಸಹಕಾರ ಸಂಘವು ಚುನಾವಣೆಗಳನ್ನು ನಡೆಸದಿರುವ ಬಗ್ಗೆ

೧೬೭೫. ಶ್ರೀ ಬಿ. ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವಿಧಾನಮಂಡಲ ನೌಕರರ ಗೃಹನಿರ್ಮಾಣ ಸಹಕಾರ ಸಂಘವು ಅಸ್ತಿತ್ವದಲ್ಲಿ ದೆಯೇ?

ಆ) ಹಾಗಿದ್ದಲ್ಲಿ, ಅದು ಎಂದಿನಿಂದ ಅಸ್ತಿತ್ವದಲ್ಲಿದೆ ಹಾಗೂ ಸದರಿ ಸಂಘದಲ್ಲಿ ನೋಂದಣಿ ಮಾಡಿಸಿರುವ ನೌಕರರ ಸಂಖ್ಯೆ ಎಷ್ಟು? ಹಾಗೂ ಸಂಘದವರು ಖರೀದಿಸಿರುವ ಜಮೀನಿನ ವಿಸ್ತೀರ್ಣ ಎಷ್ಟು?

ಇ) ಸದರಿ ಸಂಘಕ್ಕೆ ವಿಧಾನಮಂಡಲದ ನೌಕರರಲ್ಲದವರನ್ನು ನಿಯಮಗಳಿಗೆ ವಿರುದ್ಧವಾಗಿ ಸದಸ್ಯರನ್ನಾಗಿ ಮಾಡಿಕೊಂಡು ಅವರಿಂದ ನಿವೇಶನಕ್ಕಾಗಿ ಹಣವನ್ನು ವಸೂಲಿ ಮಾಡಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಮೇಲ್ಕಂಡ ಸಂಘವು ಸ್ಥಾಪನೆಯಾದಂದಿನಿಂದ ಇಂದಿನವರೆಗೂ ಚುನಾವಣೆಗಳನ್ನು ನಡೆಸದೇ ಇರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಇಲ್ಲದಿದ್ದ ಪಕ್ಷದಲ್ಲಿ ಸದರಿ ಸಂಘವು ನಿಯಮಾವಳಿಗನುಸಾರವಾಗಿ ಕ್ರಮಬದ್ಧವಾಗಿ ಚುನಾವಣೆಯನ್ನು ನಡೆಸಲು ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳುವುದೇ?

ಶ್ರೀ ಎಚ್. ವಿಶ್ವಾಂತಯ್ಯ (ಸಹಕಾರ ಸಚಿವರು).—

ಅ) ಅಸ್ತಿತ್ವದಲ್ಲಿದೆ.

ಆ) ಸದರಿ ಸಂಘವನ್ನು ನೊಂದಣಿ ಕ್ರಮಾಂಕ ಜೆ.ಆರ್.(ಬಿ.ಸಿ.ಆರ್.ಡಿ. ಆರ್.ಇ.ಜೆ.ಎನ್. ೨೧/೪೯೯೮ ೮೨-೮೩ ದಿನಾಂಕ ೨೧-೫-೮೨ ರನ್ವಯ ನೊಂದಣಿ ಮಾಡಲಾಗಿರುತ್ತದೆ. ಈ ಸಂಘವು ೨೧-೫-೮೨ ರಿಂದ ಅಸ್ತಿತ್ವದಲ್ಲಿದೆ. ಸಂಘದಲ್ಲಿ ದಿನಾಂಕ ೩೦-೬-೮೭ಕ್ಕೆ ಒಟ್ಟು ೨೨೪ ಸದಸ್ಯರು ಇರುತ್ತಾರೆ. ಸಂಘದವರು ಲಗ್ಗೇರೆ ಗ್ರಾಮದಲ್ಲಿ ೧೫ ಎಕರೆ ಜಮೀನು ಖರೀದಿಸಲು ಕರಾರು ಪತ್ರ ಮಾಡಿಕೊಂಡಿದ್ದಾರೆ.

ಇ) ಗಮನಕ್ಕೆ ಬಂದಿದೆ.

ಈ) ಸಂಘವು ನೊಂದಣಿಯಾದ ನಂತರ ೨೦-೬-೮೨ರಂದು ಸರ್ವಸದಸ್ಯ ಮಹಾಸಭೆ ನಡೆಸಿ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಿದ್ದು ನಂತರ ೮೩-೮೪ ರಿಂದ ೮೫-೮೬ರವರೆಗಿನ ಅವಧಿಗೆ ದಿನಾಂಕ ೨೪-೭-೮೫ರಂದು ಚುನಾವಣೆ ನಡೆಸಿರುತ್ತೆ. ಆದರೆ ೮೬-೮೭ ರಿಂದ ೮೮-೮೯ ಈ ಕಾಲಾವಧಿಗೆ ಚುನಾವಣೆ ನಡೆಸದೇ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ.

ಉ) ಕ್ರಮ ಕೈಗೊಳ್ಳಲಾಗಿದೆ.

ರಾಜ್ಯದಲ್ಲಿ ಕನಿಷ್ಠ ವೇತನ ನಿಗದಿಪಡಿಸಿರುವ ಉದ್ದಿಮೆಗಳು

೧೬೮೭. ಶ್ರೀ ಎನ್. ಎಂ. ಅಡ್ಯಂತಾಯ. (ಸುರತ್ಕಲ್).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಕನಿಷ್ಟ ವೇತನ ನಿಗದಿಪಡಿಸಿರುವ ಉದ್ದಿಮೆಗಳು ಹಾಗೂ ಇನ್ನಿತರ ರಂಗಗಳು ಯಾವುವು?

ಆ) ಕನಿಷ್ಠ ವೇತನ ನಿಗದಿಪಡಿಸಿದ ಮೊತ್ತವೆಷ್ಟು (ಉದ್ದಿಮೆವಾರು ವಿವರ ನೀಡುವುದು)?

ಇ) ಈ ಪೈಕಿ ಸರ್ಕಾರದ ಗಮನಕ್ಕೆ ಬಂದಿರುವ ಕನಿಷ್ಠ ವೇತನ ಪಾವತಿ ಮಾಡದ ನಿದರ್ಶನಗಳೆಷ್ಟು?

ಈ) ಕನಿಷ್ಠ ವೇತನ ಪಾವತಿ ಮಾಡದವರ ಮೇಲೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಎಸ್. ಕೆ. ಕಾಂತ (ಕಾರ್ಮಿಕ ಸಚಿವರು).—

ಅ) ನಮ್ಮ ರಾಜ್ಯದಲ್ಲಿ ಈಗ ೩೭ ಉದ್ದಿಮೆಗಳಿಗೆ ಕನಿಷ್ಠ ವೇತನವನ್ನು ನಿಗದಿಗೊಳಿಸಲಾಗಿದೆ. (ಅನುಬಂಧದಲ್ಲಿ ತೋರಿಸಿದೆ).

ಆ) ಈಗ ಕನಿಷ್ಠ ವೇತನ್ನನಿಗದಿಗೊಳಿಸಿರುವ ಉದ್ದಿಮೆಗಳಲ್ಲಿ ಕೆಳಹಂತದ ಕುಶಲರಲ್ಲದ ಕಾರ್ಮಿಕರಿಗೆ ದಿನ ಒಂದಕ್ಕೆ ೯.೫೦ ರೂ. ನಿಂದ ೧೯ ೦೦ ರೂ. ವರೆಗೆ ಹೆಚ್ಚು ಕುಶಲ ಕೆಲಸಗಾರರಿಗೆ ೧೮.೦೦ ರೂ. ನಿಂದ ೪೮.೦೦ ರೂ. ವರೆಗೆ ಕನಿಷ್ಠ ವೇತನವನ್ನು ನಿಗದಿ ಮಾಡಲಾಗಿದೆ. ಇದಲ್ಲದೆ ಗ್ರಾಹಕ ಬೆಲೆ ಸೂಚ್ಯಂಕದ ಏರಿಕೆಯ ಅಂಶಗಳಿಗನುಗುಣವಾಗಿ ತುಟ್ಟಿಭತ್ಯೆಯನ್ನು ಪಡೆಯುತ್ತಾರೆ.

ಇ) ೧೯೮೭–೮೮ ಸಾಲಿನಲ್ಲಿ ಸಂಬಾರು ೧೮೮ ಕಡಿಮೆ ಕನಿಷ್ಠ ವೇತನ ನೀಡಿದ ಹಾಗೂ ಕನಿಷ್ಠ ವೇತನ ನೀಡದ ಪ್ರಕರಣಗಳು ಇಲಾಖೆಯ ಗಮನಕ್ಕೆ ಬಂದಿದೆ.

ಈ) ೧೮೮ ಪ್ರಕರಣಗಳ ಪೈಕಿ ೧೧೨ ಪ್ರಕರಣಗಳಲ್ಲಿ ಕ್ಲೈಮ್ಸ್ ಅಥಾರಿಟಿಯವರು ೧೫,೫೦,೮೦೦ ರೂ. ಗಳಷ್ಟು ಪೊತ್ತವನ್ನು ಪರಿಹಾರ ರೂಪದಲ್ಲಿ ನೀಡಲಂಪತೆ ತೀರ್ಪು ಇತ್ತಿದ್ದಾರೆ. ಕಡಿಮೆ ಕನಿಷ್ಠ ವೇತನ ನೀಡಿದ ಪ್ರಕರಣಗಳು ಕ್ಲೈಮ್ಸ್ ಅಥಾರಿಟಿ ಮುಂದೆ ವಿಚಾರಣೆಗೆ ಬಂದಾಲ್ಲಿ ಕಾರ್ಮಿಕರಿಗೆ ಬಾಕಿ ಇರುವ ಪೊತ್ತವನ್ನಲ್ಲದೆ ಅವರ ೧೦ ಪಟ್ಟು ಪೊತ್ತವನ್ನು ದಂಡರೂಪದಲ್ಲಿ ವಿಧಿಸಬಹುದಾಗಿದೆ. ಈಗ ಇಲಾಖೆಯಿಂದ ತೀರ್ಮಾನವಾದ ಪ್ರಕರಣಗಳಲ್ಲಿ ಈ ರೀತಿ ದಂಡ ವಿಧಿಸಿದ ಪ್ರಕರಣಗಳು ಸೇರಿವೆ.

ಇಲಾಖೆಯ ಕಾರ್ಮಿಕ ನಿರೀಕ್ಷಕರು ಕನಿಷ್ಠ ವೇತನ ಕಾಯ್ದೆಯಡಿಯಲ್ಲಿ ತನಿಖೆ ಮಾಡುವಾಗ ಕಂಡುಬಂದ ನ್ಯೂನತೆಗಳ ಬಗ್ಗೆಯೂ ಪೊಕದ್ದವೆಂ ಮಾಡಿರುತ್ತಾರೆ. ೧೯೮೭–೮೮ರ ಸಾಲಿನಲ್ಲಿ ೮೩ ಪೊಕದ್ದವೆಗಳನ್ನು ಹೂಡಲಾಯಿತು.

ಅನುಬಂಧ

ಕ್ರಮ ಸಂಖ್ಯೆ	ಉದ್ದಿಮೆಯ ಹೆಸರು
೧	ಸ್ಥಳೀಯ ಸಂಸ್ಥೆಗಳು
೨	ಕಲ್ಲಾರಿಗಳಲ್ಲಿ ಕಲ್ಲು ಹೊಡೆಯುವುದು ಮತ್ತು ಕಲ್ಲು ಪುಡಿಮಾಡುವುದು.
೩	ರಸ್ತೆಗಳ ನಿರ್ಮಾಣ ಮತ್ತು ನಿರ್ವಹಣೆ ಅಥವಾ ಕಟ್ಟಡಗಳ ನಿರ್ಮಾಣ.
೪	ಕಲ್ಲು ಹೊಡೆಯುವುದು ಮತ್ತು ಕಲ್ಲು ಪುಡಿಮಾಡುವುದು.
೫	ಚರ್ಮ ಮತ್ತು ಚರ್ಮ ಹದ ಮಾಡುವುದು.
೬	ತಂಬಾಕು (ಬೀಡಿ ಕಟ್ಟುವುದು ಸೇರಿ)
೭	ಎಣ್ಣೆ ಗಿರಣಿಗಳು
೮	ಪಬ್ಲಿಕ್ ಮೋಟಾರ್ ಟ್ರಾನ್ಸ್‌ಪೋರ್ಟ್.
೯	ಅಕ್ಕಿ, ಬೇಳೆ ಮತ್ತು ಹಿಟ್ಟಿನ ಗಿರಣಿಗಳು
೧೦	ಪ್ಲಾಂಟೇಶನ್‌ಗಳು
೧೧	ಗೋಡಂಬಿ.
೧೨	ಊಟ ಮತ್ತು ವಸತಿ ಗೃಹಗಳು
೧೩	ಹೆಂಚು ಉದ್ದಿಮೆ
೧೪	ಕಾಟನ್, ಗಿಜನ್ನಿಂಗ್ ಮತ್ತು ಪ್ರೆಸ್ಸಿಂಗ್.

೧	೨
೧೫	ಮೆಷಿನ್ ಶಾಫ್ಟ್‌ಗಳನ್ನು ಹೊಂದಿದ ಅಥವಾ ಹೊಂದಿಲ್ಲದ ಫೌಂಡರಿಗಳು.
೧೬	ಆಟೋಮೊಬೈಲ್ ಇಂಜಿನಿಯರಿಂಗ್ (ದುರಸ್ತಿ ಮತ್ತು ಸರ್ವೀಸಿಂಗ್ ಸೇರಿ).
೧೭	ಕಾರ್ಡಮಮ್ ಮಿಲ್ಲಾಸಿನ್ ಮತ್ತು ಕಾರ್ಡಮಮ್ ಗಾರ್ಡನ್
೧೮	ಪ್ರಿಂಟಿಂಗ್ ಪ್ರೆಸ್.
೧೯	ಟೈಕ್ಸ್‌ಟೈಲ್ (ಸಿಲ್ಕ್).
೨೦	ಆಗರಬತ್ತಿ.
೨೧	ಚಲನಚಿತ್ರ ಉದ್ದಿಮೆ (ಪ್ರದರ್ಶನ ವಿಭಾಗ ಸೇರಿ).
೨೨	ಟೈಲರಿಂಗ್.
೨೩	ಕಾಫಿ ಕ್ಯೂರಿಂಗ್ ವರ್ಕ್ಸ್.
೨೪	ಮರಗೆಲಸ (ಪ್ಲೈವುಡ್, ಕಾರ್ಪೆಂಟರ್, ಮ್ಯಾಚ್ ವರ್ಕ್ಸ್, ಸಾಮಿಲ್ಸ್ ಮತ್ತು ಟಿಂಬರ್ ಡಿಪೋಗಳು ಸೇರಿ)
೨೫	ಸಿರಾಮಿಕ್ಸ್ ಸ್ಟೋನ್‌ವೇರ್ ಮತ್ತು ಪೋಟರೀಸ್ ವರ್ಕ್ಸ್.
೨೬	ರೇಷ್ಮೆ ಫಾರಂಗಳು.
೨೭	ಟೂಡಿ ಟ್ಯಾಪಿಂಗ್.
೨೮	ಖಂಡಸಾರಿ ಕಾರ್ಖಾನೆಗಳು.
೨೯	ರೇಷ್ಮೆ (ಸಿರಿಕಲ್ಚರ್),
೩೦	ವ್ಯವಸಾಯ.
೩೧	ಇಂಜಿನಿಯರಿಂಗ್.
೩೩	ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು
೩೩	ಕ್ಲಬ್‌ಗಳು.
೩೪	ಬೇಕರಿಗಳು.
೩೫	ಕನ್‌ಫೆಕ್ಷನರಿಗಳು.
೩೬	ಆಸ್ಪತ್ರೆಗಳು.

ಜಂಟಿ ಸಮಿತಿಯ ಕಾಲಾವಧಿ ವಿಸ್ತರಣೆಯ ಪ್ರಸ್ತಾವ

1986ನೇ ಸಾಲಿನ ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕದ ಮೇಲಿನ ಜಂಟೀ ಪರಿಶೀಲನಾ ಸಮಿತಿಯ ಕಾಲಾವಧಿಯ ವಿಸ್ತರಣೆಗೆ ಅನುಮತಿಯ ಕೋರಿಕೆ.

ಶ್ರೀ ಎಸ್ ಆರ್. ಬೊಮ್ಮಾಯಿ,—ಮಾನ್ಯ ಅಧ್ಯಕ್ಷರೇ, ೧೯೮೬ನೇ ಸಾಲಿನ ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕಕ್ಕೆ ಸಂಬಂಧಿಸಿದಂತೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿಯು ತನ್ನ ವರದಿಯನ್ನು ಒಪ್ಪಿಸಲು ೧೯೮೮ನೇ ಸೆಪ್ಟೆಂಬರ್ ತಿಂಗಳ ಅಂತ್ಯದವರೆಗೆ ಕಾಲಾವಧಿಯನ್ನು ವಿಸ್ತರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''೧೯೮೬ನೇ ಸಾಲಿನ ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕಕ್ಕೆ ಸಂಬಂಧಿಸಿದಂತೆ ರಚಿಸಲಾದ ಜಂಟೀ ಪರಿಶೀಲನಾ ಸಮಿತಿಯು ತನ್ನ ವರದಿಯನ್ನು ಒಪ್ಪಿಸಲು ೧೯೮೮ನೇ ಸೆಪ್ಟೆಂಬರ್ ತಿಂಗಳ ಅಂತ್ಯದವರೆಗೆ ಕಾಲಾವಧಿಯನ್ನು ವಿಸ್ತರಿಸುವುದು'.''

ಪ್ರಸ್ತಾವನೆ ಸರ್ವಾನುಮತದಿಂದ ಆಂಗೀಕಾರವಾಯಿತು ಮತ್ತು ಕಾಲಾವಧಿ ವಿಸ್ತರಣೆಗೆ ಅನುಮತಿ ನೀಡಲಾಯಿತು.

ಅಧ್ಯಕ್ಷರು.—ಈಗ ಗವರ್ನರ ಸೆಳೆಯುವ ಸೂಚನೆಗಳು.